ಎಂದಳು. ಬೈಕು ನಿಲ್ಲಿಸಿದೆ. ರಸ್ತೆ ಪೂರ್ತಿ ನಿರ್ಜನವಾಗಿತ್ತು. ಒಂದು ನರಪಿಳ್ಳೆಯಾಗಲೀ ಒಂದು ಬೀದಿ ನಾಯಿಯಾಗಲೀ ಅಲ್ಲಿ ಇರಲಿಲ್ಲ. ಬೈಕಿನಿಂದ ಇಳಿದವಳು ಮತ್ತೆ ಬೈಕಿನ ಹ್ಯಾಂಡಲನ್ನು ಗಟ್ಟಿಯಾಗಿ ಹಿಡಿದುಕೊಂಡು, 'ಒಂದು ಇನ್ನೂರು ರೂಪಾಯಿ ಕೊಡು ರಾಜಾ... ಕೊಡ್ತೀನಿ...' ಎಂದು ಅಲವತ್ತುಕೊಂಡಳು. ನನಗೆ ತಕ್ಷಣ ಅತೀವ ಸಿಟ್ಟು ಬಂದಿತು. 'ನನ್ನ ಹತ್ರ ಒಂದು ನಯಾಪೈಸೆಯೂ ಇಲ್ಲಾ...' ಎಂದು ಕಿರುಚಿದೆ.

'ಸಿಟ್ಟು ಮಾಡ್ಕೋಬೇಡಾ... ಕೊಡು ರಾಜಾ...' ಎಂದು ನನ್ನ ಪ್ಯಾಂಟಿನ ಜೇಬಿಗೆ ಕೈ ಹಾಕಿದಳು. ಅವಳ ಕೈ ಕಿತ್ತುಹಾಕಿ ಈವತ್ತು ನಾನು ಬೆಳಿಗ್ಗೆ ಯಾರ ಮುಖ ನೋಡಿದೆನೋ ಎಂದು ನನ್ನನ್ನೇ ನಾನು ತೀವ್ರವಾಗಿ ಹಳಿದುಕೊಂಡು ಇನ್ನೇನಾದರೂ ರಂಪಾಟ ಮಾಡಿಯಾಳು, ಯಾರಾದರೂ ರಸ್ತೆಯಲ್ಲಿ ಬಂದಾರು ಎಂದು ಹೆದರಿ ಪರ್ಸ್ ತೆಗೆದು ನೂರರ ಎರಡು ನೋಟುಗಳನ್ನು ಅವಳ ಕೈಗೆ ತುರುಕಿ ಮತ್ತೆ ತಿರುಗಿಯೂ ನೋಡದೆ ಜೋರಾಗಿ ಬೈಕು ಓಡಿಸಿದೆ. ಹಿಂದಿನಿಂದ 'ಹೋಯ್ ರಾಜಾ...' ಎಂದು ಅವಳು ಕೂಗಿದ್ದು ಕೇಳಿಸಿತು.

ರೂಮಿಗೆ ಬಂದಾಗ ತೀವ್ರವಾದ ಅಸಮಾಧಾನ ನನ್ನನ್ನು ಕಾಡುತಿತ್ತು. ಹಾಸಿಗೆಯಲ್ಲಿ ಮಲಗಿದರೂ ನಿದ್ರೆ ಬರಲಿಲ್ಲ. ಅವಳಿಗೆ ಊಟ ಕೊಡಿಸಿದ್ದುದು ನನಗೆ ಬೇಸರವಾಗಿರಲಿಲ್ಲ. ಸುಮ್ಮನೆ ಇನ್ನೂರು ರೂಪಾಯಿ ಕಿತ್ತುಕೊಂಡಳಲ್ಲಾ ಎಂದು ಹೊಟ್ಟೆ ಉರಿಯುತ್ತಿತ್ತು. ಹೋಗಲಿ ಎಲ್ಲೋ ಕಳೆದುಹೋಯಿತು ಎಂದುಕೊಳ್ಳೋಣ ಎಂದು ಎಷ್ಟೇ ಸಮಾಧಾನ ಮಾಡಿಕೊಂಡರೂ ಮನಸ್ಸು ಶಾಂತವಾಗಲಿಲ್ಲ. ಅದೇ ಕೊರಗಿನಲ್ಲಿದ್ದವನಿಗೆ ಯಾವಾಗ ನಿದ್ರೆ ಹತ್ತಿತೋ ತಿಳಿಯಲಿಲ್ಲ.

★★★

ಮಾರನೆಯ ದಿನ ಬೆಳಿಗ್ಗೆ ಕಾರ್ಖಾನೆಗೆ ಹೋದಾಗ ಹಿಂದಿನ ದಿನದ ಘಟನೆಯ ನೆನಪಾಗಿ ಮನಸ್ಸಿನಲ್ಲಿ ಒಂದು ರೀತಿಯ ಭಯ ಆವರಿಸಿತ್ತು. ಅವಳ ಮೇಲಿನ ಆಕ್ರೋಶವೇನೋ ಕಡಿಮೆಯಾಗಿತ್ತು. ಆದರೆ ಹೊಟ್ಟೆಯ ಹಸಿವು ಮನುಷ್ಯನ ಕೈಯಿಂದ ಏನೇನೆಲ್ಲಾ ಮಾಡಿಸುತ್ತದೆ ಎಂಬ ಪಾಠವನ್ನು ನನಗೆ ಅವಳು ಕಲಿಸಿದ್ದಳು. ಅದರ ಯೋಚನೆಯ ಜೊತೆಗೆ ನಮ್ಮ ಕಾರ್ಖಾನೆಯ ಮಾಲೀಕನನ್ನು ನೆನೆದು ಏನಾದರೂ ಹೆಚ್ಚುಕಡಿಮೆಯಾಗಿ ನನ್ನನ್ನು ಕೆಲಸದಿಂದ ಕಿತ್ತುಹಾಕಿದರೆ... ಎಂದು ಭೀತಿಯುಂಟಾಗಿ ಏನೂ ಕರ್ತವ್ಯ ಲೋಪ ಆಗದಂತೆ ಎಚ್ಚರ ವಹಿಸಿ ಶ್ರಮದಿಂದ ಕೆಲಸ ಮಾಡಬೇಕೆಂದು ನನಗೆ ನಾನೇ ಪ್ರತಿಜ್ಞೆ ಮಾಡಿಕೊಂಡೆ.

ಅದಾಗಿ ಎರಡು ವಾರಗಳು ಕಳೆದುಹೋಗಿದ್ದವು. ಅದೊಂದು ದಿನ ಸಂಜೆ ಕಾರ್ಖಾನೆಯ ಕೆಲಸ ಮುಗಿದ ಮೇಲೆ ಹೊರಗೆ ಹೋಗಿ ಒಂದು ಸಿಗರೇಟು ಸೇದಿ ಬಂದು ಬೈಕು ಹತ್ತಿ ರೂಮಿಗೆ ಹೋಗೋಣವೆನಿಸಿತು. ಕಾರ್ಖಾನೆಯ ಗೇಟಿನ ಹೊರಗೆ ಬಂದು ಸ್ವಲ್ಪ ದೂರದಲ್ಲಿದ್ದ ಸಿಗರೇಟಿನ ಗೂಡಂಗಡಿಯ ಕಡೆ ನಡೆಯತೊಡಗಿದೆ.

'ಹೋಯ್ ರಾಜಾ...' ಎಂದು ಹಿಂದಿನಿಂದ ಕೂಗಿದ್ದು ಕೇಳಿ ಎದೆಯೇಕೋ ಒಂದು ಕ್ಷಣ ಡವಗುಟ್ಟಿತು. ಅಲ್ಲೇ ನಿಂತು ಹಿಂದೆ ತಿರುಗಿ ನೋಡಿದೆ. ಸ್ವಲ್ಪ ದೂರದಲ್ಲಿ ಅಂದು ಸಿಕ್ಕಿದ್ದ ಬೆಲೆವೆಣ್ಣು ನನ್ನತ್ತಲೇ ಸರಸರನೇ ನಡೆದುಕೊಂಡು ಬರತೊಡಗಿದ್ದಳು. ಒಳ್ಳೆಯ ಪಿಕಲಾಟಕ್ಕೆ ಬಂದಿತಲ್ಲಾ... ಮತ್ತೆ ತಗುಲಿಕೊಂಡಳು... ಆವತ್ತು ಕಾರ್ಖಾನೆಯ ವಿಳಾಸ ಹೇಳಬಾರದಿತ್ತು ಎಂದು ಆತಂಕವಾಯಿತು.